ಶ್ರೀ ಎಸ್.ಆರ್. ಬೊಮ್ಮಾಯಿ (ಮಾನ್ಯ ಕಂದಾಯ ಸಚಿವರು).—ಮಾನ್ಯ ಅಧ್ಯಕ್ಷರೇ, ನಾನು ಮಾನ್ಯ ಪಿ.ಡಬ್ಲ್ಯೂ.ಡಿ. ಮಂತ್ರಿಗಳ ಗಮನಕ್ಕೆ ಈ ವಿಚಾರವನ್ನು ತಂದು ಇದಕ್ಕೆ ಉತ್ತರ ಕೊಡಿಸುತ್ತೇನೆ.

(10) REG. MINI WATER SUPPLY SCHEME TO WALKI IN CHIKKODI TALUK

— — —

SRI VEERAKUMAR A. PATIL (Nippani).—Mr. Speaker Sir, The Mini water supply scheme to Walki in Chikkodi Taluk is almost completed and it is lying idle for want of suitable submersible pumps. Even after a lapse of three months the villages are not getting the benefit. Hence I urge the Govenment to direct the concerned to install a suitable pump and help the villagers to have drinking water facility.

ಶ್ರೀ ಎಸ್.ಆರ್. ಬೊಮ್ಮಾಯಿ(ಮಾನ್ಯ ಕಂದಾಯ ಸಚಿವರು).—ಮಾನ್ಯ ಅಧ್ಯಕ್ಷರೇ, ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಮೇಲ್ಮನೆಯಲ್ಲಿದ್ದಾರೆ. ಅವರಿಂದ ಉತ್ತರವನ್ನು ಆದಷ್ಟು ಬೇಗ ಕೊಡಿಸುತ್ತೇನೆ.

(11) ಗುಡಗೇರಿ ಗ್ರಾಮದ ಸರಕಾರಿ ಜೂನಿಯರ್ ಕಾಲೇಜಿಗೆ ವಿಜ್ಞಾನ ಉಪಕರಣಗಳನ್ನು ಒದಗಿಸುವ ವಿಚಾರ

ಶ್ರೀ ಬಸಪ್ಪ ಅಂದಾನಪ್ಪ ಉಪ್ಪಿನ್ (ಕುಂದಗೋಳ್).—ಮಾನ್ಯ ಅಧ್ಯಕ್ಷರೇ, ನನ್ನ ತಾಲ್ಲೂಕಿನ ಗುಡಗೇರಿ ಗ್ರಾಮದಲ್ಲಿ ಸರಕಾರಿ ಜೂನಿಯರ್ ಕಾಲೇಜ್ ಇದೆ. ಅಲ್ಲಿಕಲೆ, ವಿಜ್ಞಾನ ಹಾಗೂ ವಾಣಿಜ್ಯ ಮತ್ತು ಶಿಕ್ಷಣ ವಿಷಯಗಳನ್ನು ಕಲಿಸುವ ವ್ಯವಸ್ಥೆ ಇದೆ. ವಿಜ್ಞಾನ ಶಾಸ್ತ್ರವನ್ನು ಉತ್ತಮ ರೀತಿಯಿಂದ ಬೋಧಿಸಬೇಕಾದರೆ, ಭೌತಶಾಸ್ತ್ರ, ರಸಾಯನ ಶಾಸ್ತ್ರ ಹಾಗೂ ಜೀವಶಾಸ್ತ್ರ ಬೋಧಿಸಲಿಕ್ಕೆ ಅನೇಕ ವಿಜ್ಞಾನ ಉಪಕರಣಗಳು ಬೇಕಾಗುತ್ತವೆ. ಆದರೆ ಕಾಲೇಜಿನಲ್ಲಿ ಒಂದೂ ವಿಜ್ಞಾನದ ಉಪಕರಣಗಳು ಇರುವುದಿಲ್ಲ. ಅಲ್ಲಿಯ ಉಪನ್ಯಾಸಕರ ಅಂದಾಜಿನಂತೆ ಸುಮಾರು ೮೦ ಸಾವಿರ ರೂಪಾಯಿಗಳ ಉಪಕರಣಗಳು ಬೇಕಾಗುತ್ತವೆ. ಕಾರಣ ಪ್ರಸಕ್ತ ವರ್ಷದಲ್ಲಿ ಕೊನೆಯ ಪಕ್ಷ ೪೦ ಸಾವಿರ ರೂಪಾಯಿಗಳನ್ನಾದರೂ ವಿಜ್ಞಾನ ಉಪಕರಣಗಳನ್ನು ಖರೀದಿಸಲಿಕ್ಕೆ ಅವಕಾಶ ಮಾಡಿಕೊಡ ಬೇಕೆಂದು ಮಾನ್ಯ ಶಿಕ್ಷಣ ಮಂತ್ರಿಗಳಲ್ಲಿ ವಿನಂತಿಸುತ್ತೇನೆ.

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಸಚಿವರು).—ಮಾನ್ಯ ಅಧ್ಯಕ್ಷರೇ, ಸರಕಾರಿ ಕಲಾ ಕಾಲೇಜು ಸವಣೂರು ಇಲ್ಲಿ ವಾಣಿಜ್ಯ ವಿಷಯ ಬೋಧಿಸಲು ಉಪನ್ಯಾಸಕರು.... ...

ಶ್ರೀ ಬಿ ಎ. ಉಪ್ಪಿನ್.—ಅದಲ್ಲ ನಾನು ಹೇಳಿದ್ದು, ಬೇರೆ ವಿಷಯ

ಶ್ರೀ ಡಿ. ಮಂಜುನಾಥ್.— ಸ್ವಾಮಿ, ಈಗ ನನ್ನ ಗಮನಕ್ಕೆ ಬಂದಿದೆ. ಅಲ್ಲಿ ಸಾಕಷ್ಟು ಪರ್ನಿಚರ್ ಇಲ್ಲ. ನಾನು ಈಗಾಗಲೇ ಕ್ರಮ ತೆಗೆದುಕೊಂಡಿದ್ದೇನೆ.

(ಗೊಂದಲ)

(12) ಬಿಜಾಪುರ ವ್ಯವಸಾಯೋತ್ಪನ್ನ ಮಾರುಕಟ್ಟೆ ಪ್ರದೇಶದಲ್ಲಿ ಹೊಸ ಪೋಲೀಸ್ ಠಾಣೆ ಪ್ರಾರಂಭಿಸುವ ವಿಚಾರ.

ಶ್ರೀ ಎಂ.ಎಸ್. ಉಸ್ತಾದ್(ಬಿಜಾಪುರ).—ಮಾನ್ಯ ಅಧ್ಯಕ್ಷರೇ ಮಾನ್ಯ ಗೃಹ ಮಂತ್ರಿಗಳು ಬಿಜಾಪುರ ವ್ಯವಸಾಯೋತ್ಪನ್ನ ಮಾರುಕಟ್ಟೆ ಪ್ರದೇಶದಲ್ಲಿ ಹೊಸ ಪೋಲೀಸ್ ಠಾಣೆಯನ್ನು ಪ್ರಾರಂಭಿಸುವುದಾಗಿ ಆಶ್ವಾಸನೆಯನ್ನು ಕೊಟ್ಟಿದ್ದು, ಈಗ ಅದರ ಅವಶ್ಯಕತೆ ಇರುವುದರಿಂದ ಹಾಗೂ

ಈವರೆಗೂ ಸರಕಾರದವರು ಈ ಬಗ್ಗೆ ಯಾವ ಕ್ರಮವನ್ನೂ ಕೈಗೊಳ್ಳದಿರುವುದರಿಂದ, ಅಲ್ಲಿ ಈ ಕೂಡಲೇ ಪೋಲೀಸ್ ಠಾಣೆಯನ್ನು ತೆರೆಯಬೇಕೆಂದು ಒತ್ತಾಯಿಸಲು ಈ ಸೂಚನೆ ನೀಡಲಾಗಿದೆ.

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಸಚಿವರು).—ಮಾನ್ಯ ಅಧ್ಯಕ್ಷರೇ, ಈ ವಿಷಯವನ್ನು ಗೃಹಮಂತ್ರಿಗಳ ಗಮನಕ್ಕೆ ತಂದು ಆದಷ್ಟು ಬೇಗ ಉತ್ತರ ಕೊಡಿಸುತ್ತೇನೆ.

ಶ್ರೀ ಎಂ. ಎಲ್. ಉಸ್ತಾದ್.—ಅಧ್ಯಕ್ಷರೇ, ನಾನು ನಿನ್ನೆ ಒಂದು ನೋಟೀಸ್ ಕೊಟ್ಟಿದ್ದೆ, ಅದಕ್ಕೆ ಉತ್ತರ ಬಂದಿಲ್ಲ.

ಅಧ್ಯಕ್ಷರು.—ಇದರ ಬಗ್ಗೆ ಚರ್ಚೆಗೆ ಅವಕಾಶ ಇಲ್ಲ.

ಶ್ರೀ ಎಂ.ಎಲ್. ಉಸ್ತಾದ್.—ಅವಕಾಶದ ಪ್ರಶ್ನೆ ಅಲ್ಲ, ನಿನ್ನೆದಕ್ಕೂ ಉತ್ತರ ಬಂದಿಲ್ಲ. ಇವತ್ತೂ ಉತ್ತರ ಬಂದಿಲ್ಲ.

ಅಧ್ಯಕ್ಷರು.—ಅದರ ಬಗ್ಗೆ ಡಿಸ್ಕಷನ್‌ಗೆ ಅವಕಾಶ ಇಲ್ಲ.

ಶ್ರೀ ಎಂ.ಎಲ್. ಉಸ್ತಾದ್.—ನಿನ್ನೆಯೂ ನನಗೆ ಉತ್ತರ ಬಂದಿಲ್ಲ, ಇವತ್ತೂ ಅದೇ ಉತ್ತರ ಕೊಡುತ್ತಿದ್ದಾರೆ.

ಅಧ್ಯಕ್ಷರು.—ಅವರು ಹೋಮ್ ಮಿನಿಸ್ಟರ್‌ಗೆ ಹೇಳುತ್ತಾರೆ. ಇವತ್ತಲ್ಲ ನಾಳೆಯಾದರೂ ಉತ್ತರ ಕೊಡಿಸುತ್ತೇನೆ. ಸ್ವಲ್ಪ ತಡೆಯಿರಿ.

(13) ಸರಕಾರವು ನಡೆಸುತ್ತಿರುವ ರಾತ್ರಿ ಶಾಲೆಗಳ ಬಗ್ಗೆ ಪುನರ್ ಪರಿಶೀಲನೆ ನಡೆಸುವ ವಿಚಾರ.

ಶ್ರೀ ಬಿ. ಆರ್. ನೀಲಕಂಠಪ್ಪ (ತರೀಕೆರೆ).—ಮಾನ್ಯ ಅಧ್ಯಕ್ಷರೇ, ಸರಕಾರವು ಪ್ರಾಥಮಿಕ ಮತ್ತು ಮಾಧ್ಯಮಿಕ ಪಾಠಶಾಲೆಗಳಲ್ಲಿ, ರಾತ್ರಿ ಶಾಲೆಗಳನ್ನು ನಡೆಸುವುದಾಗಿಯೂ, ಇದರ ಮೂಲಕ ಪ್ರತಿ ಶಾಲೆಯಲ್ಲಿಯೂ ಒಬ್ಬೊಬ್ಬ ಶಿಕ್ಷಕರನ್ನು ರಾತ್ರಿ ಶಾಲೆಗೆ ನೇಮಿಸಿರುತ್ತಾರೆ. ಆದರೆ ಇದರಿಂದ ಹಗಲು ಶಿಕ್ಷಕರ ಕೊರತೆಯಾಗಿದೆ. ಇಡೀ ರಾಜ್ಯದಲ್ಲಿ ಶಿಕ್ಷಕರ ಕೊರತೆ ತುಂಬಾ ಇರುವುದರಿಂದ ಹಗಲು ಶಾಲೆಗಳ ಶಿಕ್ಷಕರ ಕೊರತೆಯನ್ನು ಮತ್ತಷ್ಟು ಹೆಚ್ಚಿಸಿದಂತಾಗುತ್ತದೆ. ಮತ್ತು ರಾತ್ರಿ ಶಾಲೆಯೂ ಕೂಡಾ ವಿಫಲವಾಗಿದೆ. ಕಾರಣ 'ಹೊಟ್ಟಿಗೆ ಹಿಟ್ಟಿಲ್ಲ ಜುಟ್ಟಿಗೆ ಮಲ್ಲಿಗೆ ಹೂವು' ಎಂದಾಗಿದೆ. ಸರಕಾರದ ಈ ಕ್ರಮ ಹಗಲು ಬಾರದ ಈ ಎಳೆ ವಯಸ್ಸಿನ ಮಕ್ಕಳು ರಾತ್ರಿಯ ವೇಳೆ ಶಾಲೆಗೆ ಬರುತ್ತಾರೆಯೇ? ಮತ್ತು ಹಗಲೇ ಪಾಠ ಮಾಡದ ಉಪಾಧ್ಯಾಯರುಗಳು ರಾತ್ರಿ ವೇಳೆಯಲ್ಲಿ ಪಾಠ ಮಾಡುವರೇ? ಗ್ರಾಮಾಂತರ ಪ್ರದೇಶದಲ್ಲಿ ಹಗಲು ವೇಳೆಯ ಪಾಠ ಶಾಲೆಗಳಿಗೆ ಮಕ್ಕಳನ್ನು ಕಳುಹಿಸದ ಪೋಷಕರು ಸಂಜೆ ಶಾಲೆಗೆ ಮಕ್ಕಳನ್ನು ಕಳುಹಿಸುತ್ತಾರೆಯೇ? ಸರ್ಕಾರವು ತನ್ನ ಈ ಕ್ರಮವನ್ನು ಪುನಃ ಪರಿಶೀಲಿಸಬೇಕೆಂದು ಮಾನ್ಯ ಶಿಕ್ಷಣ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಸಚಿವರು).—ಮಾನ್ಯ ಅಧ್ಯಕ್ಷರೇ, ಇದನ್ನು ಮಾಡಿರುವ ಉದ್ದೇಶ ಒಳ್ಳೆಯದು. ಮಾನ್ಯ ಸದಸ್ಯರು ಹೇಳಿದರು, ಇದಕ್ಕೆ ಯಾರು ಹುಡುಗರು ಬರುವುದಿಲ್ಲ ಎಂದು. ನಾವು ಅಕ್ಷರ ಸೇನೆ ಯೋಜನೆಯನ್ನು ಜಾರಿಗೆ ತಂದಿದ್ದೇವೆ. ಇದರ ಪ್ರಕಾರ ಡ್ರಾಪ್‌ಔಟ್ಸ್ ಯಾರಿದ್ದಾರೆ ಅವರಿಗಾಗಿ ರಾತ್ರಿ ಶಾಲೆಗಳನ್ನು ಮಾಡಬೇಕೆಂದು ಮಾಡಿದ್ದೇವೆ. ಮಾನ್ಯ ಸದಸ್ಯರು ಹೇಳುವುದನ್ನು ವಿಚಾರ ಮಾಡುತ್ತೇನೆ.

ಶ್ರೀ ಬಿ. ಆರ್. ನೀಲಕಂಠಪ್ಪ.—ರಾತ್ರಿ ಶಾಲೆಗಳಲ್ಲಿ ಲೈಟ್ ಇಲ್ಲ.

ಶ್ರೀ ಡಿ. ಮಂಜುನಾಥ್.—ಲೈಟ್ ಇಲ್ಲದೇ ಹೋದರೆ ಲೈಟ್ ಹಾಕಿಸಿ ಕೊಡೋಣ. ರಾತ್ರಿ ಶಾಲೆಗಳನ್ನು ಉತ್ತಮಪಡಿಸುವುದಕ್ಕೆ ಎಲ್ಲಾ ಪ್ರಯತ್ನ ಮಾಡುತ್ತೇನೆ.